ಕನ್ನಡ ಪೋಸ್ಟ್

ಇದು ಸುದ್ದಿ ವಿಲಾಸ

KANNADA POST

ಸಂಪಾದಕ : ಮಂಜು ಬನವಾಸೆ

ಕನ್ನಡ ದಿನ ಪತ್ರಿಕೆ Kannada Daily

ಹಾಸನ E-mail : kannadapostnews@gmail.com / ಕನ್ನಡ post Price: ₹1

Vol.No.01 | Issue. 187 | Pages. 2 | Date: 03-06-2025, TUESDAY RNI NO: KARKAN/2024/89601

ಸಂಪುಟ : 01 - ಸಂಚಿಕೆ : 187 - ಪುಟಗಳು : 2 - 03 ಜೂನ್ 2025 ಮಂಗಳವಾರ Ph: 8762954248 ದರ : ₹1

129 ಕೋಟಿ ರೂ. ವೆಚ್ಚದಲ್ಲಿ ರೈಲ್ವೆ ಮೇಲ್ಸೇತುವೆ

ದುದ್ದದಲ್ಲಿ ನಿಯೋಜಿತ ಕಾಮಗಾರಿ । ಸ್ಥಳ ಪರಿಶೀಲಿಸಿದ ಸಂಸದ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಸುಮಾರು 129 ಕೋಟಿ ರೂ. ವೆಚ್ಚದಲ್ಲಿ ತಾಲ್ಲೂಕಿನ ದುದ್ದ ಗ್ರಾಮದಲ್ಲಿ ರೈಲ್ವೆ ಮೇಲ್ಸೇತುವೆ ಕಾಮಗಾರಿ ಕೈಗೊಳ್ಳಲಾಗುತ್ತಿದ್ದು ಸೋಮವಾರ ಸಂಸದ ಶ್ರೇಯಸ್ ಪಟೇಲ್ ಸ್ಥಳ ಪರಿಶೀಲಿಸಿದರು.

ಭೂಮಿ ನೀಡುವ ರೈತರಿಗೆ ಪರಿಹಾರ ನಿಗದಿ ಹಾಗೂ ಕಾಮಗಾರಿ ನೀಲನಕ್ಷೆ ಕುರಿತು ಸಮಗ್ರ ಮಾಹಿತಿ ಪಡೆದರು. ದುದ್ದ ಹೋಬಳಿ ಕೇಂದ್ರದಲ್ಲಿ ಹಾದು ಹೋಗಿರುವ ರೈಲ್ವೆ ಹಳಿಯಿಂದ ಇತ್ತೀಚೆಗೆ ಟ್ರಾಫಿಕ್ ಸಮಸ್ಯೆ ಮಿತಿಮೀರಿದೆ.

ಉದ್ದೇಶಿತ ಮೇಲ್ಸೇತುವೆ ನಿರ್ಮಾಣಕ್ಕೆ ಕೇಂದ್ರ ಸರ್ಕಾರ ಮುಂದಾಗಿದ್ದು, ಟೆಂಡರ್ ಪ್ರಕ್ರಿಯೆ ಮುಗಿದಿದೆ. ಮೇಲ್ಸೇತುವೆ ಕಾಮಗಾರಿಗಾಗಿ 4 ಎಕರೆ ಭೂಮಿ ಸ್ವಾಧೀನಪಡಿಸಿಕೊಳ್ಳಬೇಕಾಗಿದೆ. ಈ ಹಿನ್ನೆಲೆಯಲ್ಲಿ ಭೂ ಮಾಲೀಕರ ಒಪ್ಪಿಗೆ ಪಡೆಯಲು ಸಂಸದರು ಮುಂದಾಗಿದ್ದಾರೆ.

ಈ ವೇಳೆ ರೈತರು ಮಾತನಾಡಿ, ರೈಲ್ವೆ ಮೇಲ್ಸೇತುವೆ ನಿರ್ಮಾನಕ್ಕೆ ನಮ್ಮ ವಿರೋಧವಿಲ್ಲ.

ಆದರೆ ಈಗ ಕೈಗೊಂಡಿರುವ ಕಾಮಗಾರಿ ಮಾದರಿ ಅವೈಜ್ಞಾನಿಕವಾಗಿದೆ. ಈಗ ಸಿದ್ದಪಡಿಸಿರುವ ನೀಲನಕ್ಷೆ ಪ್ರಕಾರ ಕಾಮಗಾರಿ ಆರಂಭಿಸಿದರೆ ಫಲವತ್ತಾದ ಭೂಮಿ ಕಳೆದುಕೊಳ್ಳಬೇಕಾಗುತ್ತದೆ. ಆದ್ದರಿಂದ ಯೋಜನೆ ಸ್ವರೂಪ ಬದಲಿಸಬೇಕು.

ಈಗಾಗಲೇ ಹಲವು ಸರ್ಕಾರಿ ಯೋಜನೆಗಳಿಗೆ ಭೂಮಿಕೊಟ್ಟು ನಷ್ಟ ಅನುಭವಿಸಿದ್ದೇವೆ. ಈ ಕಾಮಗಾರಿಯಲ್ಲಾದರೂ ನ್ಯಾಯ ಕೊಡಿಸಬೇಕು ಎಂದು ಮನವಿ ಮಾಡಿದರು.

ಉಪವಿಭಾಗಾಧಿಕಾರಿ ಮಾರುತಿ, ತಹಶೀಲ್ದಾರ್ ಗೀತಾ, ರೈಲ್ವೆ ಇಲಾಖೆ ಎಇಇ ವಿನೋದ್, ಸಿನೀಯರ್ ಸೆಕ್ಷನ್ ಎಂಜಿನೀಯರ್ ನಾಗರಾಜ್, ಬಷೀರ್ ಹಾಗೂ ಇತರ ಅಧಿಕಾರಿಗಳು ಇದ್ದರು.

ಎಲ್ಲರ ಒಪ್ಪಿಗೆ ಮುಖ್ಯ

ಸಂಸದ ಶ್ರೇಯಸ್ ಪಟೇಲ್ ಮಾತನಾಡಿ, ದುದ್ದ ಗ್ರಾಮದಲ್ಲಿ ರೈಲ್ವೆ ಮೇಲ್ಸೇತುವೆಯ ಅವಶ್ಯಕತೆಯಿದೆ. ಯಾರಿಗೂ ತೊಂದರೆಯಾಗದ ರೀತಿಯಲ್ಲಿ ಕಾಮಗಾರಿ ನಡೆಸಲಾಗುವುದು. ಆದ್ದರಿಂದಲೇ ಸ್ಥಳ ಪರಿಶೀಲನೆ ನಡೆಸಲಾಗುತ್ತಿದೆ. ಅಧಿಕಾರಿ ಹಾಗೂ ಭೂಮಾಲೀಕರ ವಿಶ್ವಾಸ ಗಳಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಟ್ರಾಫಿಕ್ ಕಿರಿಕಿರಿ ವಿಪರೀತ

ಮಾರ್ಗದಲ್ಲಿ ಅರಸೀಕೆರೆ-ಹಾಸನ ಮಾರ್ಗದ ರೈಲ್ವೆ ಹಳಿ ಹಾದು ಹೋಗಿದ್ದು ನಿತ್ಯ ಹತ್ತಾರು ರೈಲು ಸಂಚರಿಸುತ್ತವೆ. ಹಗಲು ಹಾಗೂ ರಾತ್ರಿ ವೇಳೆಯಲ್ಲಿ ಅಧಿಕ ಪ್ರಮಾಣದಲ್ಲಿ ರೈಲು ಸಂಚಾರ ಇರುವುದರಿಂದ ವಾಹನ ಓಡಾಟಕ್ಕೆ ಭಾರೀ ಸಮಸ್ಯೆಯಾಗಿದೆ. ಮೇಲ್ಸೇತುವೆ ನಿರ್ಮಿಸಬೇಕೆಂಬ ಕೂಗು ಬಹಳ ದಿನಗಳಿಂದ ಕೇಳಿಬಂದಿತ್ತು. ಅರಸೀಕೆರೆ, ಹಾಸನ, ತಿಪಟೂರು, ಗಂಡಸಿ ಕೇಂದ್ರಗಳಿಗೆ ಸಂಪರ್ಕಿಸುವ ಮುಖ್ಯ ರಸ್ತೆ ಇದಾಗಿದೆ. ದುದ್ದ ಹೋಬಳಿ ಕೇಂದ್ರವಾಗಿದ್ದು ಮೊದಲಿಗಿಂತ ವಿಸ್ತಾರವಾಗಿದೆ. ವಾಹನಗಳ ಓಡಾಟವೂ ಹೆಚ್ಚಿರುವುದರಿಂದ ರೈಲು ಸಂಚರಿಸುವ ಸಮಯದಲ್ಲಿ ರಸ್ತೆ ಬಂದ್ ಮಾಡಿದಾಗ ಕಿ.ಮೀ. ವರೆಗೆ ಟ್ರಾಫಿಕ್ ಜಾಮ್ ಉಂಟಾಗುತ್ತದೆ. ಹೀಗಾಗಿ ಇಲ್ಲಿ ರೈಲ್ವೆ ಮೇಲ್ಸೇತುವೆಯ ಅವಶ್ಯಕತೆ ಹೆಚ್ಚಿದೆ. ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿದ ರೈಲ್ವೆ ಇಲಾಖೆಯು ಕಾಮಗಾರಿಗೆ ಮುಂದಾಗಿದೆಯಾದರೂ ಭೂಸ್ವಾಧೀನ ಪ್ರಕ್ರಿಯೆ ಆರಂಭಿಕ ವಿಘ್ನ ಎಂಬಂತೆ ಗೋಚರವಾಗುತ್ತಿದೆ. ಸಮಸ್ಯೆಗೆ ಯಾವ ರೀತಿ ಪರಿಹಾರ ಕಂಡುಕೊಳ್ಳಲಾಗುತ್ತದೆ ಎಂಬುದನ್ನು ಕಾದು ನೋಡಬೇಕಿದೆ.

ಮಕ್ಕಳ ಭವಿಷ್ಯ ರೂಪಿಸುವಲ್ಲಿ ಶಿಕ್ಷಕರ ಪಾತ್ರ ಹಿರಿದು

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹೊಳೆನರಸೀಪುರ: ವಿದ್ಯಾರ್ಥಿಗಳನ್ನು ಸಮಾಜಕ್ಕೆ ಜವಾಬ್ದಾರಿಯುತ ನಾಗರಿಕರನ್ನಾಗಿ ರೂಪಿಸುವಲ್ಲಿ ಶಿಕ್ಷಕರು ಮತ್ತು ಪೋಷಕರ ಪಾತ್ರ ಮಹತ್ವದ್ದಾಗಿದೆ ಎಂದು ಅರಕಲಗೂಡು ಶಾಸಕ ಎ.ಮಂಜು ತಿಳಿಸಿದರು.

ತಾಲ್ಲೂಕಿನ ಓಡನಹಳ್ಳಿ ಗ್ರಾಮ ಪಂಚಾಯಿತಿ ವತಿಯಿಂದ ಎಸ್ಎಸ್ಎಲ್ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಶೇ. 90ಕ್ಕೂ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಪುರಸ್ಕರಿಸಿ ಮಾತನಾಡಿದರು. ಪ್ರಾಥಮಿಕ ಹಂತದ ವ್ಯಾಸಂಗಕ್ಕೆ ಪ್ರಾಶಸ್ತ್ಯ ಸಿಕ್ಕಿದೆ. ಇದರಿಂದಾಗಿಯೇ ಹಳ್ಳಿ ಮಕ್ಕಳು ಸಹ ಕನಿಷ್ಠ ಅಂಕಗಳಿಸುವುದು ತಪ್ಪಿದೆ. ಪೋಷಕರಲ್ಲೂ ಸಹ ಮಕ್ಕಳ ಭವಿಷ್ಯದ ಕಡೆಗೆ ಆಸಕ್ತಿ ಮೂಡಿರುವುದು ಒಳ್ಳೆಯ ಬೆಳವಣಿಗೆ.

ಹಳ್ಳಿಮೈಸೂರು ಹೋಬಳಿ ವ್ಯಾಪ್ತಿಯಲ್ಲೇ ಇದೇ ಮೊದಲ ಗ್ರಾಪಂ ಇಂತಹದೊಂದು ಶೈಕ್ಷಣಿಕವಾಗಿ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಕಾರ್ಯಕ್ರಮ ರೂಪಿಸಿರುವುದು ಹೆಮ್ಮೆಯ ವಿಚಾರ ಎಂದರು. ಗ್ರಾಮೀಣ ಭಾಗದ ವಿದ್ಯಾರ್ಥಿಗಳ ಓದಿಗೂ ಸ್ಫೂರ್ತಿ ನೀಡುವ ಕೆಲಸ ಆಗಬೇಕಿದ್ದು, ಇದಕ್ಕೆ ಗ್ರಾಮ ಹಂತದಲ್ಲೇ ಯೋಜನಾ ಬದ್ಧ ಕಾರ್ಯಕ್ರಮ ರೂಪಿಸಬೇಕಾಗಿದೆ. ಸರ್ಕಾರಿ ಶಾಲೆಗಳಲ್ಲಿಯೇ ಪೋಷಕರು ತಮ್ಮ ಮಕ್ಕಳನ್ನು ಸೇರಿಸಿ ಶಾಲೆಯ ಅಭಿವೃದ್ಧಿ ಮತ್ತು ಪ್ರಗತಿಗೆ ಸಹಕರಿಸಿ ಎಂದು ಸಲಹೆ ನೀಡಿದರು.

ಗ್ರಾಪಂ ಅಧ್ಯಕ್ಷೆ ಶೃತಿ ಕುಮಾರ್, ಉಪಾಧ್ಯಕ್ಷ ಚಂದ್ರಶೇಖರ್, ಸದಸ್ಯ ಆರ್.ಎಂ.ಕುಮಾರ್, ತಾಪಂ ಇಒ ಮುನಿರಾಜ್ ಹಾಗೂ ಇತರರಿದ್ದರು.

ಭೀಕರ ಅಪಘಾತದಲ್ಲಿ ಇಬ್ಬರ ಸಾವು

ಹಾಸನ: ತಾಲ್ಲೂಕಿನ ಮೊಸಳೆ ಗಡಿ ಬಳಿ ಸೋಮವಾರ ಡಿವೈಡರ್‌ಗೆ ಬೈಕ್ ಡಿಕ್ಕಿಯಾಗಿ ಸ್ಥಳದಲ್ಲೇ ಇಬ್ಬರು ಯುವಕರು ಮೃತಪಟ್ಟಿದ್ದಾರೆ.

ನಗರದ ಪೆನ್ಷನ್ ಮೊಹಲ್ಲಾ ನಿವಾಸಿ ಹುಸೈಫ್ (23), ಹೊಳೆನರಸೀಪುರ ಪಟ್ಟಣ ಗಾಂಧಿ ನಗರದ ನಿವಾಸಿ ಸಮೀರ್ (21) ಮೃತ ಯುವಕರು. ಪೆನ್ಷನ್ ಮೊಹಲ್ಲಾದ ಮಹಮದ್ ಸೂಫಿಯಾನ್ (15) ಗಂಭೀರ ಗಾಯಗೊಂಡಿದ್ದು ಆಸ್ಪತ್ರೆಗೆ ದಾಖಲಿಸಲಾಗಿದೆ.

ಮೂವರು ಒಂದೇ ಬೈಕ್‌ನಲ್ಲಿ ಹೊಳೆನರಸೀಪುರದಿಂದ ಹಾಸನದ ಕಡೆಗೆ ಬರುತ್ತಿದ್ದ ವೇಳೆ ಅತಿ ವೇಗದಿಂದ ನಿಯಂತ್ರಣ ತಪ್ಪಿ ಡಿವೈಡರ್‌ಗೆ ಡಿಕ್ಕಿ ಹೊಡೆದು ಅಪಘಾತ ನಡೆದಿದೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ಗೊರೂರು ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆಯೇ ಸವಾಲು: ಮಧುಸೂಧನ್

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ಪರಿಸರ ಸಂರಕ್ಷಣೆಯಲ್ಲಿ ಪ್ಲಾಸ್ಟಿಕ್ ತ್ಯಾಜ್ಯ ವಿಲೇವಾರಿ ನಿರ್ವಹಣೆಯೇ ಸವಾಲಿನ ಕೆಲಸವಾಗಿದೆ ಎಂದು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಎಂ.ಕೆ. ಮಧುಸೂಧನ್ ಹೇಳಿದರು. ಪಟ್ಟಣದ ಲಯನ್ಸ್ ಸೇವಾ ಮಂದಿರದಲ್ಲಿ ಪರಿಸರ ದಿನಾಚರಣೆ ಅಂಗವಾಗಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿ, ಅತಿಯಾದ ಪ್ಲಾಸ್ಟಿಕ್ ಬಳಕೆಯಿಂದ ವಾತಾವರಣ ಕಲುಷಿತಗೊಳ್ಳುತ್ತಿದೆ. ಪರಿಸರ ಸಂರಕ್ಷಣೆ ಕುರಿತು ಸಾರ್ವಜನಿಕರೇ ಎಚ್ಚರ ವಹಿಸಬೇಕಿದೆ. ಪ್ರಕೃತಿಯ ಪ್ರತಿಯೊಂದು ಜೀವಿಗಳ ಸಂರಕ್ಷಣೆ ಕೂಡ ಅಗತ್ಯವಾಗಿದೆ. ಹಾರ್ನ್‌ಬಿಲ್ ಮತ್ತು ರಣಹದ್ದು ಸೇರಿ ಹಲವು ಪಕ್ಷಿ ಪ್ರಬೇಧ ನಶಿಸಿ ಹೋಗುತ್ತಿರುವುದಲ್ಲದೆ ಸುತ್ತಲಿನ ಹವಾರು ಗಿಡ ಮರಗಳು ಕಣ್ಮರೆಯಾಗುತ್ತಿದೆ. ಅಭಿವೃದ್ಧಿ ಹೆಸರಿನಲ್ಲಿ ಮಾಡಲಾಗುತ್ತಿರುವ ಕಾಮಗಾರಿಗಳಿಂದ ಕೂಡ ಪರಿಸರಕ್ಕೆ ಧಕ್ಕೆಯಾಗುತ್ತಿದೆ ಎಂದರು.

ಇತ್ತೀಚಿನ ವರ್ಷಗಳಲ್ಲಿ ರಸ್ತೆ, ವಿದ್ಯುತ್ ಹಾಗು ಕುಡಿಯುವ ನೀರಿನ ಯೋಜನೆಗಾಗಿ ಪಶ್ಚಿಮಘಟ್ಟದ ಪರಿಸರದ ಮೇಲೆ ನಡೆದಿರುವ ದೌರ್ಜನ್ಯ ಊಹೆಗೂ ಮೀರಿ ನಷ್ಟವುಂಟು ಮಾಡಿದೆ. ಜನಸಂಖ್ಯಾ ಹೆಚ್ಚಳ ಕೂಡ ಅರಣ್ಯ ನಾಶಕ್ಕೆ ಕಾರಣವಾಗಿದೆ. ಈ ನಿಟ್ಟಿನಲ್ಲಿ ಹೆಚ್ಚು ಮರಗಳನ್ನು ಬೆಳೆಸಲು ಸಂಘ ಸಂಸ್ಥೆಗಳೂ ಕೈ ಜೋಡಿಸಬೇಕು. ಅಲ್ಲದೆ ಪಶ್ಚಿಮಘಟದಲ್ಲಿ ವಿಶೇಷ ಪ್ರಬೇಧಗಳನ್ನು ಸಂರಕ್ಷಿಸುವ ಅಗತ್ಯವಿದೆ. ಪ್ಲಾಸ್ಟಿಕ್ ಬಳಕೆ ಮಿತಿಮೀರಿದ್ದು ಅದರಲ್ಲೂ ಏಕಬಳಕೆ ಪ್ಲಾಸ್ಟಿಕ್‌ನಿಂದ ಪರಿಸರದ ಮೇಲೆ ಹೆಚ್ಚು ಹಾನಿಯಾಗುತ್ತಿದೆ. ಪರಿಸರದ ಮೇಲೆ ಉಂಟಾಗುತ್ತಿರುವ ದುಷ್ಪಾರಿಣಾಮಗಳಿಂದ ವಾತಾವರಣದಲ್ಲಿ ವ್ಯಾಪಕ ವ್ಯತ್ಯಾಸಗಳುಂಟಾಗುತ್ತಿದೆ. ಮುಂದಿನ ಪೀಳಿಗೆಗಾಗಿ ನಾವು ಪರಿಸರ ಉಳಿಸಲು ಅಗತ್ಯವಾದ ಮುಂಜಾಗ್ರತಾ ಕ್ರಮ ಕೈಗೊಳ್ಳದಿದ್ದರೆ ಭವಿಷ್ಯದ ಪೀಳಿಗೆಗೆ ನಾವು ಅನ್ಯಾಯ ಮಾಡಿದಂತಾಗುತ್ತದೆ ಎಂದರು.

ವಿದ್ಯಾರ್ಥಿಗಳು ವ್ಯಾಸಂಗಕ್ಕಷ್ಟೇ ಸೀಮಿತರಾಗಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ವಿದ್ಯಾರ್ಥಿಗಳು ಮೊಬೈಲ್ ಗೀಳಿಗೆ ಅಂಟಿಕೊಂಡು ವಿದ್ಯಾಭ್ಯಾಸ ಹಾಳು ಮಾಡಿಕೊಳ್ಳಬಾರದು ಎಂದು ಶಾಸಕ ಸಿ.ಎನ್. ಬಾಲಕೃಷ್ಣ ಸಲಹೆ ನೀಡಿದರು.

ಪಟ್ಟಣದ ಸರ್ಕಾರಿ ಪದವಿ ಕಾಲೇಜಿನಲ್ಲಿ 2024-25ನೇ ಸಾಲಿನ ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಗಳ ಸಮಾರೋಪ ಸಮಾರಂಭದ ಉದ್ಘಾಟಿಸಿ ಮಾತನಾಡಿ, ವಿದ್ಯಾರ್ಥಿಗಳಿಗೆ ಏಕಾಗ್ರತೆ ಅತಿ ಮುಖ್ಯ, ಮೊಬೈಲ್ ಮೂಲಕ ಇದನ್ನು ಕಳೆದುಕೊಳ್ಳಬಾರದು. ಯುವಶಕ್ತಿ ದೇಶದ ಆಸ್ತಿ ಹಾಗೂ ಶಕ್ತಿ. ದೇಶ ಹೆಚ್ಚು ಯುವಕರನ್ನು ಹೊಂದಿದ್ದು ಅಡ್ಡದಾರಿ ಹಿಡಿಯಬಾರದು ಎಂದು ಎಚ್ಚರಿಸಿದರು.

ಸಾಹಿತ್ಯ, ಸಂಗೀತ, ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ಪ್ರತಿಭಾವಿದ್ಯಾರ್ಥಿಗಳಾಗಿ ಹೊರ ಹೊಮ್ಮಬೇಕು. ಕಲೆ ಆರಾಧಕನ ಸ್ವತ್ತಾಗಿದೆ. ಸ್ನೇಹಮಯ ಜೀವನದ ಮೂಲಕ ಸಮಾಜದಲ್ಲಿ ಎತ್ತರಕ್ಕೆ ಬೆಳೆಯಬೇಕು ಎಂದು ಸಲಹೆ ನೀಡಿದರು.

ನಮ್ಮ ನಡವಳಿಕೆಗಳೇ ನಮ್ಮನ್ನು ಎತ್ತರಕ್ಕೆ ಬೆಳೆಸುತ್ತದೆ ಹಾಗೂ ಅದರಲ್ಲಿ ವ್ಯಕ್ತಿತ್ವ ಅಡಗಿದೆ. ವಿದ್ಯಾರ್ಥಿಗಳು ಪುಸ್ತಕ ಹಾಗೂ ಪತ್ರಿಕೆಗಳನ್ನು ಓದುವ ಹವ್ಯಾಸ ಹೊಂದಬೇಕು. ಸ್ನೇಹಿತರನ್ನಾಗಿ ಮಾಡಿಕೊಳ್ಳಬೇಕು. ಪದವಿ ಕಾಲೇಜಿಗೆ ಬಿಸಿಎ ಕೋರ್ಸ್ ತರಲಾಗಿದ್ದು ದಾಖಲಾತಿ ಆರಂಭವಾಗಿದೆ ಎಂದು ಮಾಹಿತಿ ನೀಡಿದರು.

ವಿದ್ಯಾರ್ಥಿಗಳಿಗೆ ಮೂಲಭೂತ ಸೌಕರ್ಯಗಳನ್ನು ಕಾಲೇಜಿನ ಮೂಲಕ ಒದಗಿಸಲಾಗಿದೆ. ಕೆಎಸ್ ಆರ್‌ಟಿಸಿ ಬಸ್ ನಿಲುಗಡೆ ಕಾಲೇಜಿನ ಬಳಿ ಆಗುತ್ತಿದೆ. ಶಿಕ್ಷಣದ ಮೂಲಕ ಜ್ಞಾನವಂತರಾಗಿ ಸಮಾಜಕ್ಕೆ ಕೊಡುಗೆಯಾಗಬೇಕು ಎಂದರು.

ಹಾಸನ ಸರ್ಕಾರಿ ಕಲಾ ಕಾಲೇಜು ಪ್ರಾಂಶುಪಾಲ ಡಾ. ಎಂ.ಬಿ. ಇರ್ಷಾದ್ ಮಾತನಾಡಿ, ಹಾಸನ ಜಿಲ್ಲೆಯ ಖ್ಯಾತಿಯನ್ನು ಇಮ್ಮಡಿಗೊಳಿಸಿದ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ, ಬೂಕರ್ ಪ್ರಶಸ್ತಿ ಪಡೆದ ಬಾನು ಮುಷ್ತಾಕ್ ಅವರ ಕಾರ್ಯ ಸ್ಮರಿಸಿ, ವಿದ್ಯಾರ್ಥಿಗಳು ಶಿಕ್ಷಣದ ಸಂಗಡ ಕೌಶಲ್ಯ ಪ್ರತಿಭೆಗಳಾಗಿ ಹೊರಹೊಮ್ಮಬೇಕು ಎಂದು ಮಾರ್ಗದರ್ಶನ ನೀಡಿದರು.

ಭವಿಷ್ಯದಲ್ಲಿ ಜೀವನ ಸುಂದರವಾಗಲು ಇಂದಿನ ಸ್ಪರ್ಧಾತ್ಮಕ ಜಗತ್ತನ್ನು ಎದುರಿಸಲು ಜ್ಞಾನದ ಪ್ರತಿಭೆ ಅಗತ್ಯವಿದೆ. ತಾಯಿಯ ಋಣ ಬಲು ದೊಡ್ಡದು, ಮಾತೃ ಹೃದಯಕ್ಕೆ ಎಂದು ಧಕ್ಕೆ ತರಬಾರದು. ಅವರ ಆಸೆಗಳನ್ನು ಈಡೇರಿಸಿ ಸುಸಂಸ್ಕೃತ ಮೌಲ್ಯಯುತ ಗುಣಗಳ ಕಣಜಗಳಾಗಬೇಕು. ಸಾಧನೆಯ ಛಲ ಆತ್ಮಸ್ಥೈರ್ಯದ ಮೂಲಕ ಸಮಾಜದಲ್ಲಿ ಉತ್ತಮ ಪ್ರಜೆಗಳಾಗಿ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು. ಪ್ರಾಂಶುಪಾಲ ಎಸ್.ಎಲ್. ಗಂಗೆಗೌಡ ಅಧ್ಯಕ್ಷತೆ ವಹಿಸಿದ್ದರು.

ಪ್ರತಿಭಾವಂತ ವಿದ್ಯಾರ್ಥಿಗಳು ಹಾಗೂ ಕ್ರೀಡಾ ಸಾಧಕ ವಿದ್ಯಾರ್ಥಿಗಳನ್ನು ಶಾಸಕರು ಹಾಗೂ ಗಣ್ಯರು ಅಭಿನಂದಿಸಿದರು. ಪ್ರತಿಭಾವಂತರಿಗೆ ಪ್ರತಿವರ್ಷ ಪ್ರೋತ್ಸಾಹ ಬಹುಮಾನ ನೀಡುವ ಬಗ್ಗೆ ಶಾಸಕರು ಸಭೆಯಲ್ಲಿ ಘೋಷಿಸಿದರು.

ಪುರಸಭೆ ಅಧ್ಯಕ್ಷ ಮೋಹನ್, ಟಿಎಪಿಸಿಎಂಎಸ್ ಅಧ್ಯಕ್ಷ ಅನಿಲ್ ಮರಗೂರು, ನಗರ ಅಭಿವೃದ್ಧಿ ಯೋಜನಾ ಪ್ರಾಧಿಕಾರದ ಮಾಜಿ ಅಧ್ಯಕ್ಷ ವೆಂಕಟೇಶ್, ಉಪನ್ಯಾಸಕರಾದ ಕೆ.ಎಸ್. ಗುರುರಾಜ್, ಡಾ. ಪೂರ್ಣಿಮಾ, ಹಳ್ಳಿವೆಂಕಟೇಶ್, ಪ್ರಕಾಶ್, ಕುಮಾರ್, ರೂಪ ಅಜಯ್, ಶಿವಕುಮಾರ್ ವಾಸುದೇವ್ ಮುಂತಾದವರಿದ್ದರು.

ಜೂ. 9ಕ್ಕೆ ಸಾಹಿತಿ ಬಾನು ಮುಷ್ತಾಕ್‌ಗೆ ನಾಗರಿಕ ಸನ್ಮಾನ

ಹಾಸನ: ಅಂತರಾಷ್ಟ್ರೀಯ ಬೂಕರ್ ಪ್ರಶಸ್ತಿಗೆ ಭಾಜನರಾದ ಹಿರಿಯ ಸಾಹಿತಿ ಬಾನು ಮುಷ್ತಾಕ್ ಅವರಿಗೆ ಜೂ. 9 ರಂದು ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ನಾಗರಿಕ ಸನ್ಮಾನ ಹಮ್ಮಿಕೊಳ್ಳಲಾಗಿದೆ ಎಂದು ಜನಪರ ಚಳವಳಿ ಒಕ್ಕೂಟದ ಧರ್ಮೇಶ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿ, ಕನ್ನಡ ಸಾಹಿತ್ಯ ಪರಿಷತ್, ಜನಪರ ಚಳವಳಿಗಳ ಒಕ್ಕೂಟ, ಕನ್ನಡಪರ ಸಂಘಟನೆಗಳು, ವಿವಿಧ ಸಂಘ ಸಂಸ್ಥೆಗಳು, ನಾಗರಿಕ ಸಮಿತಿ, ದಲಿತ ಸಂಘಟನೆಗಳ ಆಶ್ರಯದಲ್ಲಿ ನಾಗರಿಕ ಸನ್ಮಾನ ಹಮ್ಮಿಕೊಳ್ಳಲಾಗಿದೆ.

ಕನ್ನಡ ಸಾಹಿತ್ಯಕ್ಕೆ ಅದರಲ್ಲೂ ಪ್ರಾದೇಶಿಕ ಭಾಷೆಗೆ ಜಾಗತಿಕ ಮಟ್ಟದಲ್ಲಿ ಮನ್ನಣೆ ದೊರಕಿದೆ. ಸಮೃದ್ಧ ಹಾಗೂ ಶಾಸ್ತ್ರೀಯ ಭಾಷೆ ಕನ್ನಡ ಇಂದು ಹಲವು ಸಮಸ್ಯೆ ಮತ್ತು ದಾಳಿ ಎದುರಿಸುತ್ತಿರುವ ಸಂದರ್ಭದಲ್ಲಿ ಕನ್ನಡ ಸತ್ವ ಜಾಗತಿಕ ಮಟ್ಟದಲ್ಲಿ ಗುರುತಿಸಲ್ಪಟ್ಟಿರುವುದು ಬಹಳ ಸಂತಸದ ವಿಷಯ ಎಂದರು.

ಜೂ. 9ರ ಬೆಳಿಗ್ಗೆ 10 ಗಂಟೆಗೆ ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಬಾನು ಮುಷ್ತಾಕ್ ಮತ್ತು ದೀಪಾ ಭಸ್ತಿ ಅವರಿಗೆ ಸನ್ಮಾನಿಸಲಾಗುವುದು. ಕಾರ್ಯಕ್ರಮವನ್ನು ಕನ್ನಡ ನಾಡಿನ ಹಿರಿಯ ಸಾಹಿತಿ ನಾಡೋಜ ಡಾ. ಬರಗೂರು ರಾಮಚಂದ್ರಪ್ಪ ಉದ್ಘಾಟಿಸುವರು. ಡಾ.ಎಚ್.ಎಸ್. ಅನುಪಮಾ ಅವರು ಅಭಿನಂದನಾ ನುಡಿಗಳನ್ನು ಆಡಲಿದ್ದಾರೆ ಎಂದರು.

ರಾಷ್ಟ್ರೋತ್ಥಾನ ಶಾಲೆಯಲ್ಲಿ ಅರ್ಥಪೂರ್ಣ ಅಕ್ಷರಾಭ್ಯಾಸ

ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಭಾಗಿ । ಮೊದಲ ವರ್ಷ 800 ವಿದ್ಯಾರ್ಥಿಗಳ ಪ್ರವೇಶ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ನಗರದ ಕೃಷ್ಣ ನಗರದಲ್ಲಿರುವ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ಸೋಮವಾರ ನೂತನ ಶೈಕ್ಷಣಿಕ ವರ್ಷದ ವಿದ್ಯಾರ್ಥಿಗಳಿಗೆ ಅಕ್ಷರಾಭ್ಯಾಸ ಮತ್ತು ವಿದ್ಯಾರಂಭ ಕಾರ್ಯಕ್ರಮ ಹಮ್ಮ

ಕೈ ಬೀಸಿ ಕರೆಯುತ್ತಿವೆ ಪ್ರವಾಸಿ ತಾಣಗಳು

ಶೆಟ್ಟಿಹಳ್ಳಿ ಚರ್ಚ್, ಹಾಲುವಾಗಿಲು ಕಟ್ಟೆಗಳಲ್ಲಿ ಜನವೋ ಜನ । ಮಲೆನಾಡಿಗೂ ಪ್ರವಾಸಿಗರ ಲಗ್ಗೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಜಿಲ್ಲಾದ್ಯಂತ ನಿರಂತರ ಮಳೆಯಿಂದ ನದಿ, ಹಳ್ಳ, ತೊರೆಗಳು ಮೈದುಂಬಿ ಹರಿಯುತ್ತಿದ್ದು ಪ್ರವಾಸಿಗರು ಲಗ್ಗೆ ಇಟ್ಟುತ್ತಿದ್ದಾರೆ.

ನಗರ ಸಮೀಪದ ಹಾಲುವಾಗಿಲು ಕಟ್ಟೆ, ಸೀಗೆ ಗುಡ್ಡ, ಶೆಟ್ಟಿಹಳ್ಳಿ ಚರ್ಚ್, ಸೇತುವೆ, ಸಕಲೇಶಪುರದ ಮೂಕನಮನೆ ಜಲಪಾತ, ಬಿಸ್ಲೆ ಘಾಟ್, ಪಟ್ಲ ಬೆಟ್ಟ, ಬೆಟ್ಟದ ಭೈರವೇಶ್ವರ ದೇವಸ್ಥಾನ, ರಾಮನಾಥಪುರ ಸೇತುವೆ ಸೇರಿದಂತೆ ಮುಂತಾದ ಕಡೆ ಜನರು ಕಿಕ್ಕಿರಿದು ಸೇರುತ್ತಿದ್ದಾರೆ. ಮೊಬೈಲ್‌ನಲ್ಲಿ ಫೋಟೊ ಕ್ಲಿಕ್ಕಿಸಿಕೊಳ್ಳುತ್ತಾ ಪ್ರಕೃತಿ ಸೌಂದರ್ಯ ಸವಿದರು.

ಶೆಟ್ಟಿಹಳ್ಳಿ ಚರ್ಚ್

ಹಾಲುವಾಗಿಲು ಕಟ್ಟೆಯಿಂದ 14 ಕಿ.ಮೀ. ದೂರದಲ್ಲಿರುವ ಐತಿಹಾಸಿಕ ಶೆಟ್ಟಿಹಳ್ಳಿ ರೋಸರಿ ಚರ್ಚ್ ವೀಕ್ಷಣೆಗೆ ಸಾರ್ವಜನಿಕರು ಲಗ್ಗೆ ಇಡುತ್ತಿದ್ದಾರೆ. ಬೆಂಗಳೂರು, ಮೈಸೂರು ಕಡೆಯಿಂದ ಕಾರಿನಲ್ಲಿ ಬರುತ್ತಿರುವ ಯುವಕ-ಯುವತಿಯರು ಚರ್ಚ್‌ನ ಸೊಬಗು ಕಣ್ತುಂಬಿಕೊಳ್ಳುತ್ತಿದ್ದಾರೆ.

ಹೇಮಾವತಿ ನದಿ ಹಿನ್ನೀರಿನಲ್ಲಿರುವ ಈ ಚರ್ಚ್ ಅನ್ನು 1860ರ ದಶಕದಲ್ಲಿ ಫ್ರೆಂಚ್ ಮಿಷನರಿಗಳು ನಿರ್ಮಿಸಿದರು. ಗಾಥಿಕ್ ಶೈಲಿಯ ಚರ್ಚ್ ಇದಾಗಿದ್ದು ಬ್ರಿಟಿಷ್ ಕಾಲದ ಎಸ್ಟೇಟ್ ಮಾಲೀಕರಿಗಾಗಿ ಚರ್ಚ್ ನಿರ್ಮಿಸಲಾಯಿತು.

1960ರಲ್ಲಿ ಹೆಮಾವತಿ ಅಣೆಕಟ್ಟೆ ನಿರ್ಮಾಣದ ನಂತರ ಈ ಪ್ರದೇಶ ಜಲಾವೃತಗೊಂಡ ಚರ್ಚ್ ಆ ಬಳಿಕ ಪ್ರವಾಸಿ ತಾಣವಾಗಿ ಮಾರ್ಪಟ್ಟಿತು. ಪ್ರತಿವರ್ಷ ಮಳೆಗಾಲದಲ್ಲಿ ಜಲಮಟ್ಟ ಏರಿದಾಗ ಚರ್ಚ್ ಭಾಗಶಃ ಅಥವಾ ಸಂಪೂರ್ಣವಾಗಿ ನೀರಿನಲ್ಲಿ ಮುಳುಗುತ್ತದೆ. ಇದರಿಂದಾಗಿ ಇದನ್ನು ಫ್ಲೋಟಿಂಗ್ ಚರ್ಚ್ ಅಥವಾ ಮುಳುಗದ ಟೈಟಾನಿಕ್ ಎಂದು ಕರೆಯುತ್ತಾರೆ. ಈ ಚರ್ಚ್ ತನ್ನ ವಿಶಿಷ್ಟ ಇತಿಹಾಸ ಮತ್ತು ವಾಸ್ತುಶಿಲ್ಪದಿಂದ ಪ್ರವಾಸಿಗರನ್ನು ಆಕರ್ಷಿಸುತ್ತದೆ.

ಮನಮೋಹಕ ಹಾಲುವಾಗಿಲು ಕಟ್ಟೆ

ಜಿಲ್ಲಾ ಕೇಂದ್ರ ಹಾಸನದಿಂದ ಕೇವಲ 8 ಕಿ.ಮೀ. ದೂರದಲ್ಲಿರುವ ಹಾಲುವಾಗಿಲು ಕಟ್ಟೆ ಪ್ರವಾಸಿಗರ ಹಾಟ್ ಸ್ಪಾಟ್ ಆಗಿದೆ. ಯಗಚಿ ಜಲಾಶಯದಿಂದ ನೀರು ಬಿಟ್ಟಿರುವುದರಿಂದ ಹೇಮಾವತಿ ನದಿ ಸೇರುವ ನೀರಿಗೆ ಹಾಲುವಾಗಿಲು ಸಮೀಪ ಜಾಕ್‌ವೆಲ್ ನಿರ್ಮಿಸಿದ್ದು ಅಲ್ಲಿ ಭೋರ್ಗರೆಯುವ ನೀರು ಎಂತವರನ್ನು ಮಂತ್ರ ಮುಗ್ಧರನ್ನಾಗಿಸುತ್ತದೆ. ಜಲಪಾತದಂತೆ ಧುಮ್ಮಿಕ್ಕುವ ನೀರಿನ ಓಟ ನೋಡುವುದೇ ಚೆಂದ. ಸಾರ್ವಜನಿಕರಿಗಾಗಿಯೇ ಮೆಟ್ಟಿಲು ಮಾಡಿದ್ದು ಅದರ ಸಹಾಯದಿಂದ ಇಳಿದು ನೀರಿನ ಮಧ್ಯಭಾಗದ ವರೆಗೆ ತೆರಳಬಹುದು.

ಚಲಿಸುವ ಮೋಡಗಳು

ಇನ್ನು ಸಕಲೇಶಪುರ ತಾಲ್ಲೂಕಿನ ಬೆಟ್ಟ ಗುಡ್ಡಗಳು ಈ ಸಮಯದಲ್ಲಿ ಅತ್ಯಾಕರ್ಷಕ ಸ್ಥಳಗಳಾಗಿವೆ. ಚಲಿಸುವ ಮೋಡಗಳು ಕೈಗೆ ತಾಕುವ ಅನುಭವವಾಗುವುದರಿಂದ ಇಲ್ಲಿನ ಬಿಸ್ಲೆ, ಪಟ್ಲ, ಕಾಗಿನಹರೆ ಬೆಟ್ಟಗಳು ಸುಂದರ ಪ್ರವಾಸಿ ತಾಣಗಳಾಗಿವೆ. ಧಾರಾಕಾರ ಮಳೆಯಿಂದ ಮೂಕನಮನೆ ಜಲಪಾತ ಧುಮ್ಮಿಕ್ಕಿ ಹರಿಯುತ್ತಿದೆ.

ಜಾಗರೂಕತೆ ಇರಲಿ

ಜಿಲ್ಲೆಯ ಪ್ರವಾಸಿ ತಾಣಗಳ ವೀಕ್ಷಣೆಗೆ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿದ್ದು ಜಾಗರೂಕತೆಯನ್ನು ವಹಿಸಬೇಕಾಗುತ್ತದೆ. ಫೋಟೊ, ರೀಲ್ಸ್‌ಗಾಗಿ ಅಪಾಯಕ್ಕೆ ಆಹ್ವಾನ ನೀಡುವ ಸಾಧ್ಯತೆಗಳು ಹೆಚ್ಚಿವೆ. ಹಾಲುವಾಗಿಲು ಕಟ್ಟೆಯಲ್ಲಿ ನೀರು ಹರಿಯುವ ಜಾಗ ಸಂಪೂರ್ಣ ಪಾಚಿಗಟ್ಟಿರುವುದರಿಂದ ಮೈ ಮರೆತರೆ ಅನಾಹುತ ಕಟ್ಟಿಟ್ಟ ಬುತ್ತಿ. ಸ್ನೇಹಿತರು ಅಥವಾ ಕುಟುಂಬಸ್ಥರೊಂದಿಗೆ ತೆರಳುವುದು ಉತ್ತಮ. ಶೆಟ್ಟಿಹಳ್ಳಿ ಚರ್ಚ್ ಸಹ ಹಳೆಯ ಕಾಲದ ಕಟ್ಟಡವಾಗಿದ್ದು ಈಗ ಎರಡರಿಂದ ಮೂರು ಅಡಿಯಷ್ಟು ನೀರಿದೆ. ಕಟ್ಟಡದ ಬಳಿಗೆ ತೆರಳಿ ಫೋಟೊ ಪಡೆಯುವ ಆಸೆ ಬಿಟ್ಟು ದೂರದಿಂದಲೇ ಕಣ್ತುಂಬಿಕೊಳ್ಳುವುದು ಒಳಿತು. ಅಲ್ಲಿ ಪ್ಲಾಸ್ಟಿಕ್ ಬಾಟಲಿ, ಗಿಡಗಂಟಿ ಬೆಳೆದು ಪರಿಸರ ಕಲುಷಿತಗೊಂಡಿದ್ದು ನೀರಿಗಿಳಿದರೆ ಆರೋಗ್ಯ ಸಮಸ್ಯೆ ಬಾಧಿಸಬಹುದು.

ಕಾಡಾನೆಗಳ ದಾಳಿಗೆ ಅಪಾರ ಬೆಳೆ ನಾಶ



ಸಕಲೇಶಪುರ: ಮಲೆನಾಡು ಭಾಗದಲ್ಲಿ ಕಾಡಾನೆಗಳ ಉಪಟಳ ಮಿತಿಮೀರಿದ್ದು, ತಾಲ್ಲೂಕಿನ ಕರಡಿಗಾಲ ಗ್ರಾಮದಲ್ಲಿ ಗಜಪಡೆ ದಾಳಿಗೆ ಅಪಾರ ಪ್ರಮಾಣದ ಬೆಳೆ ಹಾನೀಗಿಡಾಗಿದೆ.

ಗ್ರಾಮದ ಸೋಮಶೇಖರ್ ಎಂಬುವರಿಗೆ ಸೇರಿದ ತೋಟಕ್ಕೆ ಲಗ್ಗೆಯಿಟ್ಟ ಕಾಡಾನೆ ಹಿಂಡು ಬೆಳೆ, ನೀರು ಹಾಯಿಸುವ ಪೈಪ್‌ಗಳನ್ನು ನಾಶಪಡಿಸಿವೆ. ಗೊನೆ ಬಿಟ್ಟಿದ್ದ ನೂರಕ್ಕೂ ಹೆಚ್ಚು ಬಾಳೆ ಗಿಡ, ಶುಂಠಿ, ಕಾಫಿ ಗಿಡಗಳನ್ನು ತಿಂದು ನೆಲಕ್ಕುರುಳಿಸಿವೆ. ನೀರು ಹಾಯಿಸುವ ಪೈಪ್ ಹಾಗೂ ಜನರೇಟರ್ ತುಳಿದು ಹಾಕಿದ್ದು ಭಾರೀ ನಷ್ಟವುಂಟಾಗಿದೆ. ಪಕ್ಕದ ಕಾಫಿ ತೋಟದಲ್ಲಿ ಹತ್ತಕ್ಕೂ ಹೆಚ್ಚು ಕಾಡಾನೆಗಳು ಬೀಡು ಬಿಟ್ಟಿರುವುದರಿಂದ ಸುತ್ತಲಿನ ರೈತರು ಆತಂಕಪಡುವಂತಾಗಿದೆ. ರಾತ್ರಿ ಹೊತ್ತು ದಾಂಗುಡಿ ಇಡುವ ಆನೆಗಳು ಬೆಳೆ ತಿಂದು ನಾಶಪಡಿಸುವುದಲ್ಲದೆ ತುಳಿದು ಬೆಳೆಯನ್ನು ಹಾಳು ಮಾಡುತ್ತವೆ. ಸಾಲ ಸೋಲ ಮಾಡಿ ಕೈಗೊಳ್ಳುವ ಬೆಳೆ ಮಣ್ಣು ಪಾಲಾಗುತ್ತಿದೆ. ಅರಣ್ಯ ಇಲಾಖೆ ಅಧಿಕಾರಿಗಳು ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಬೇಕು. ಉಪಟಳ ನೀಡುತ್ತಿರುವ ಆನೆಗಳನ್ನು ಸ್ಥಳಾಂತರಿಸುವ ಜೊತೆಗೆ ಸೂಕ್ತ ಪರಿಹಾರ ಕಲ್ಪಿಸಬೇಕು ಎಂದು ಸ್ಥಳೀಯರು ಆಗ್ರಹಿಸಿದ್ದಾರೆ.

ಅಪರಿಚಿತ ವಾಹನ ಡಿಕ್ಕಿ: ಯುವಕ ಸಾವು

ಹೊಳೆನರಸೀಪುರ: ಅಪರಿಚಿತ ವಾಹನ ಡಿಕ್ಕಿಯಾಗಿ ಬೈಕ್ ಸವಾರ ಮೃತಪಟ್ಟಿರುವ ಘಟನೆ ತಾಲ್ಲೂಕಿನ ರಾಮದೇವರಕಟ್ಟೆಯ ಪಾಲಿಕಾ ಹೋಟೆಲ್ ಸಮೀಪ ಶನಿವಾರ ನಡೆದಿದೆ. ಹಳ್ಳಿಮೈಸೂರು ಹೋಬಳಿ ಲಕ್ಕೂರು ಗ್ರಾಮದ ಹೇಮಂತ್‌ಕುಮಾರ್ (20) ಮೃತರು. ಹಾಸನದಲ್ಲಿರುವ ಸಹೋದರಿಯನ್ನು ಕರೆದುಕೊಂಡು ಬರಲೆಂದು ಬೈಕ್‌ನಲ್ಲಿ ಬರುತ್ತಿದ್ದಾಗ ಎದುರುಗಡೆಯಿಂದ ಬಂದ ಅಪರಿಚಿತ ವಾಹನ ಡಿಕ್ಕಿಯಾಗಿದೆ. ಗಂಭೀರ ಗಾಯಗೊಂಡಿದ್ದ ಆತನನ್ನು ಆಸ್ಪತ್ರೆಗೆ ದಾಖಲಿಸಲಾಯಿತಾದರೂ ಮಾರ್ಗಮಧ್ಯೆ ಮೃತಪಟ್ಟಿದ್ದಾನೆ. ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮರಕ್ಕೆ ಬಸ್ ಡಿಕ್ಕಿ: ಐವರಿಗೆ ಗಾಯ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಆಲೂರು: ಎದುರಿನಿಂದ ಬಂದ ಬೈಕ್‌ಗೆ ಡಿಕ್ಕಿ ಹೊಡೆಯುವುದನ್ನು ತಪ್ಪಿಸಲು ಹೋಗಿ ಕೆಎಸ್‌ಆರ್‌ಟಿಸಿ ಬಸ್ ಮರಕ್ಕೆ ಡಿಕ್ಕಿಯಾಗಿ ಐವರು ಗಾಯಗೊಂಡಿರುವ ಘಟನೆ ತಾಲ್ಲೂಕಿನ ಚನ್ನಾಪುರ ಬಳಿ ನಡೆದಿದೆ.

ಆಲೂರಿನಿಂದ ಹೆಮ್ಮಿಗೆಗೆ ತೆರಳುತ್ತಿದ್ದ ಬಸ್ ಚಾಲಕ ಚನ್ನಾಪುರ ಬಳಿ ಹೋಗುತ್ತಿದ್ದಾಗ ಎದುರುಗಡೆಯಿಂದ ಬಂದ ಬೈಕ್‌ಗೆ ಡಿಕ್ಕಿಯಾಗುತ್ತದೆಂದು ಎಡಕ್ಕೆ ತಿರುಗಿಸಿದ್ದಾರೆ. ಹೀಗಾಗಿ ನಿಯಂತ್ರಣ ತಪ್ಪಿ ಮರಕ್ಕೆ ಡಿಕ್ಕಿಯಾಗಿದೆ. ಅಪಘಾತದ ರಭಸಕ್ಕೆ ಬಸ್ ಮುಂಭಾಗ ಸಂಪೂರ್ಣ ನುಜ್ಜುಗುಜ್ಜಾಗಿದೆ. ಬಸ್ ಚಾಲಕ, ನಿರ್ವಾಹಕ ಸೇರಿ ಐವರು ಪ್ರಯಾಣಿಕರಿಗೆ ಗಾಯಗಳಾಗಿವೆ. ತಕ್ಷಣವೇ ಗಾಯಾಳುಗಳನ್ನು ಆ್ಯಂಬುಲೆನ್ಸ್ ಮೂಲಕ ತಾಲ್ಲೂಕು ಆಸ್ಪತ್ರೆಗೆ ದಾಖಲಿಸಲಾಯಿತು. ಸ್ಥಳಕ್ಕೆ ಆಲೂರು ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲಿಸಿದರು.

ಮನದಹಾದಿ

- ಪ್ರಶಾಂತ್ ಭಟ್

A widow's game (Spanish,2025 ,Netflix)

ಅವಳ ಗಂಡನ ಕೊಲೆಯಾಗಿದೆ. ಪೋಲಿಸರಿಗೆ ಅವಳ ಮೇಲೆ ಅನುಮಾನ. ಅವಳ ವಿಚಾರಣೆ ಮಾಡುವಾಗ ಮದುವೆಗೆ ಮೊದಲು ತನಗೆ ಸಂಬಂಧ ಇದ್ದದ್ದನ್ನೂ ಕ್ಷಮಿಸಿದ ಉದಾರಿ ಗಂಡ ಎಂದು ಗಂಡನ ಗುಣಗಾನ ಮಾಡುತ್ತಾಳೆ. ಆದರೆ ಗಂಡನ ಸಾವಿಗೆ ಅಗತ್ಯಕ್ಕಿಂತ ಜಾಸ್ತಿಯೇ ಅವಳು ಅಳುತ್ತಿದಾಳೆ ಎಂದು ಪೋಲಿಸರಿಗೆ ಅನುಮಾನ. ಈ ಸಿನಿಮಾ ನಿಜ ಘಟನೆಯ ಆಧರಿಸಿದ್ದು. ಹಾಗಾಗಿ ನೋಡುಗ, ಇದನ್ನು ನಡೆದದ್ದು ಎಂಬ ಮನಸ್ಥಿತಿಯಲ್ಲೇ ನೋಡಿ ಶಾಕ್ ಅನುಭವಿಸುತ್ತಾನೆ. ಒಳ್ಳೆಯ ನಟನೆ ಮತ್ತು ಚಿತ್ರಕಥೆ ಸಿನಿಮಾವನ್ನು ಇನ್ನೂ ಚೆನ್ನಗಾಗಿಸಿದೆ.

ರೇಟಿಂಗ್ 8.5/10

ಇತಿಹಾಸದಲ್ಲಿ ಈ ದಿನ

ಜೂನ್-3

1756: ಬಂಗಾಳದ ಫೋರ್ಟ್ ವಿಲಿಯಂ ಅನ್ನು ಸಿರಾಜ್-ಉದ್-ದೌಲ್ ವಶಪಡಿಸಿಕೊಂಡ.

1908: ಸ್ವಾತಂತ್ರ್ಯ ಹೋರಾಟಗಾರ ಶ್ರೀ ಅರವಿಂದೋ ಅವರನ್ನು ಮಣಿಕ್ ಟಾಲಾ ಬಾಂಬ್ ಸ್ಫೋಟ ಪ್ರಕರಣದಲ್ಲಿ ಬಂಧಿಸಲಾಯಿತು.

2014: ತೆಲಂಗಾಣ ರಾಜ್ಯವು ಅಧಿಕೃತವಾಗಿ ಆಂಧ್ರ ಪ್ರದೇಶದಿಂದ ವಿಭಜನೆಯಾಗಿ ಭಾರತದ 29ನೇ ರಾಜ್ಯವಾಗಿ ಸ್ಥಾಪಿತವಾಯಿತು. ಈ ದಿನವನ್ನು ಪ್ರತಿವರ್ಷ ತೆಲಂಗಾಣ ಸ್ಥಾಪನಾ ದಿನವಾಗಿ ಆಚರಿಸಲಾಗುತ್ತದೆ. ಇದು ರಾಜ್ಯದ ಜನರ ದೀರ್ಘಕಾಲದ ಹೋರಾಟದ ಫಲಿತಾಂಶವಾಗಿದೆ.

ಜನನ

1955: ನಂದನ್ ನಿಲೇಕಣಿ, ಇನ್ಫೋಸಿಸ್‌ನ ಸಹಸ್ಥಾಪಕ ಮತ್ತು ಯುಐಡಿಎಐ ಮಾಜಿ ಅಧ್ಯಕ್ಷ.

1956: ಮಣಿ ರತ್ನಂ, ಪ್ರಖ್ಯಾತ ಭಾರತೀಯ ಚಲನಚಿತ್ರ ನಿರ್ದೇಶಕ.

1987: ಸೋನಾಕ್ಷಿ ಸಿನ್ಹಾ, ಬಾಲಿವುಡ್ ನಟಿ.

ಮರಣ

1988: ರಾಜ್ ಕಪೂರ್, ಹಿಂದಿ ಚಿತ್ರರಂಗದ ಪ್ರಸಿದ್ಧ ನಟ, ನಿರ್ದೇಶಕ ಮತ್ತು ನಿರ್ಮಾಪಕ. ಮೆರಾ ನಾಮ್ ಜೋಕರ್, ಆವಾರಾ, ಶ್ರೀ 420, ಸಂಗಮ್, ಬಾಬಿ ಮುಂತಾದ ಚಿತ್ರಗಳ ಮೂಲಕ ಭಾರತೀಯ ಚಿತ್ರರಂಗದಲ್ಲಿ ಛಾಪು ಬಿಟ್ಟಿದ್ದಾರೆ. ಅವರಿಗೆ ಪದ್ಮಭೂಷಣ (1971) ಮತ್ತು ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ (1987) ನೀಡಲಾಗಿದೆ.

1990: ಪಂಡಿತ್ ಶ್ರೀರಾಮ್ ಶರ್ಮಾ ಆಚಾರ್ಯ, ಅಖಿಲ ವಿಶ್ವ ಗಾಯತ್ರಿ ಪರಿವಾರದ ಸ್ಥಾಪಕ ಪಂಡಿತ್ ಶ್ರೀರಾಮ್ ಶರ್ಮಾ ಆಚಾರ್ಯ ಅವರು ಹರಿದ್ವಾರದಲ್ಲಿ ನಿಧನರಾದರು.

2004: ಡಾ. ಶ್ರೀಕಾಂತ್ ಜಿಚ್ಕರ್, ಭಾರತದ ಅತ್ಯಂತ ವಿದ್ಯಾವಂತ ವ್ಯಕ್ತಿಗಳಲ್ಲಿ ಒಬ್ಬರಾದ ಡಾ. ಶ್ರೀಕಾಂತ್ ಜಿಚ್ಕರ್ ಅವರು 2004ರ ಜೂನ್ 2 ರಂದು 49ನೇ ವಯಸ್ಸಿನಲ್ಲಿ ನಾಗ್ಪುರದಲ್ಲಿ ನಿಧನರಾದರು. 20ಕ್ಕೂ ಹೆಚ್ಚು ಪದವಿ ಪಡೆದಿದ್ದು, 26ನೇ ವಯಸ್ಸಿನಲ್ಲಿ ಭಾರತದ ಅತೀ ಕಿರಿಯ ಶಾಸಕರಾಗಿ ಆಯ್ಕೆಯಾಗಿದ್ದರು.

ಮಹಾತ್ಮ ಗಾಂಧಿ ಪಾರ್ಕ್‌ನಲ್ಲಿ ಶ್ರಮದಾನ

ಹಾಸನ: ನಗರದ ಎಂ.ಜಿ. ರಸ್ತೆಯಲ್ಲಿರುವ ಮಹಾತ್ಮ ಗಾಂಧೀಜಿ ಪಾರ್ಕ್‌ನಲ್ಲಿ ಪರಿಸರ ದಿನಾಚರಣೆ ಅಂಗವಾಗಿ ಬ್ಯಾಂಕ್ ಆಫ್ ಬರೋಡಾ ಕ್ಷೇತ್ರಿಯ ಕಾರ್ಯಾಲಯದಿಂದ ಸೋಮವಾರ ಸ್ವಚ್ಛತಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಮಹಾನಗರ ಪಾಲಿಕೆ ಮೇಯರ್ ಎಂ. ಚಂದ್ರೇಗೌಡ ಹಾಗೂ ಬ್ಯಾಂಕ್ ಆಫ್ ಬರೋಡಾ ಕ್ಷೇತ್ರಿಯ ಕಾರ್ಯಾಲಯ ಮುಖ್ಯಸ್ಥ ಸುರೇಶ್ ಶೆಟ್ಟಿ ಅವರು ಶ್ರಮದಾನಕ್ಕೆ ಚಾಲನೆ ನೀಡಿದರು.

ಸ್ವಚ್ಛತಾ ಕಾರ್ಯದ ನಂತರ ಬ್ಯಾಂಕ್ ಸಿಬ್ಬಂದಿ ಎಂ.ಜಿ. ರಸ್ತೆಯಲ್ಲಿ ಜಾಗೃತಿ ಜಾಥಾ ನಡೆಸಿದರು. ಪ್ಲಾಸ್ಟಿಕ್ ಬಳಕೆಯಿಂದ ಪರಿಸರದ ಮೇಲಾಗುತ್ತಿರುವ ದುಷ್ಪರಿಣಾಮ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸಲಾಯಿತು.

ಬೇಲೂರಿನಲ್ಲಿ ರಕ್ತದಾನ ಶಿಬಿರ ಯಶಸ್ವಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಬೇಲೂರು: ಉದ್ಯಮಿ ಹಾಗೂ ಕಾಂಗ್ರೆಸ್ ಮುಖಂಡ ಗ್ರಾನೈಟ್ ರಾಜಶೇಖರ್ ಅವರ ಹುಟ್ಟುಹಬ್ಬದ ಅಂಗವಾಗಿ ಭಾನುವಾರ ಪಟ್ಟಣದಲ್ಲಿ ರಾಜಶೇಖರ್ ಅಭಿಮಾನಿಗಳಿಂದ ರಕ್ತದಾನ ಹಾಗೂ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಪುಷ್ಪಗಿರಿ ಸಂಸ್ಥಾನ ಮಠದ ಶ್ರೀ ಸೋಮಶೇಖರ ಸ್ವಾಮೀಜಿ ಮಾತನಾಡಿ, ರಾಜಶೇಖರ್ ಅವರ ಬೆಳವಣಿಗೆ ನೋಡಿದರೆ ಅಚ್ಚರಿಯಾಗುತ್ತದೆ. 40 ವರ್ಷಗಳ ಹಿಂದೆ ಪುಷ್ಪಗಿರಿ ಬೆಟ್ಟದಲ್ಲಿ ಕಲ್ಲು ಒಡೆಯುತ್ತಿದ್ದ ಸಂದರ್ಭದಲ್ಲಿ ಕೂಲಿ ಕಾರ್ಮಿಕರಿಗೆ ಕುಡಿಯುವ ನೀರನ್ನು ಬಸ್ತಿಹಳ್ಳಿಯಿಂದ ಪುಷ್ಪಗಿರಿ ಬೆಟ್ಟಕ್ಕೆ ಕಲ್ಪಿಸುತ್ತಿದ್ದರು. ಆಗ ಒಂದು ಅಥವಾ ಎರಡು ರೂಪಾಯಿ ದುಡಿಯುತ್ತಿದ್ದ ರಾಜಣ್ಣ ಇಂದು ಅದೇ ಕಲ್ಲಿನಿಂದ ಉದ್ಯಮಿ ಎನಿಸಿಕೊಂಡಿದ್ದಾರೆ. ಬಡವರು, ನಿರಾಶ್ರಿತರಿಗೆ ಮತ್ತು ಅಂಗವಿಕಲರಿಗೆ ಶಕ್ತಿಮೀರಿ ಸಹಾಯ ಮಾಡುತ್ತಿದ್ದಾರೆ ಎಂದರು.

ಪ್ರಸ್ತುತ ದಿನಗಳಲ್ಲಿ ಹುಟ್ಟುಹಬ್ಬವೆಂದರೆ ತಿನ್ನುವುದು, ಕುಡಿಯುವುದು ಎಂಬಂತಾಗಿದೆ. ಆದರೆ ರಾಜಶೇಖರ್ ಅವರು ಯಾವುದೇ ಆಡಂಬರವಿಲ್ಲದೆ ತಮ್ಮ ಹುಟ್ಟುಹಬ್ಬವನ್ನು ಆರೋಗ್ಯ ಶಿಬಿರದ ಮೂಲಕ ಆಚರಿಸಿಕೊಳ್ಳುತ್ತಿರುವುದು ಸಂತಸ ತಂದಿದೆ ಎಂದರು.

ಗ್ರಾನೈಟ್ ರಾಜಶೇಖರ್ ಮಾತನಾಡಿ, ನಾನು ಕಾಂಗ್ರೆಸ್ ಪಕ್ಷದಲ್ಲಿ ಗುರುತಿಸಿಕೊಂಡರೂ ಪಕ್ಷಬೇಧ ಮರೆತು ಎಲ್ಲರೂ ನನ್ನನ್ನು ಇಷ್ಟಪಡುತ್ತಾರೆ. ದಾನದಲ್ಲಿ ಶ್ರೇಷ್ಟದಾನ ರಕ್ತದಾನ ಎಂದು ನಂಬಿ ಅಭಿಮಾನಿಗಳು ರಕ್ತದಾನ ಶಿಬಿರ ಏರ್ಪಡಿಸಿದ್ದು ಒಳ್ಳೆಯ ಬೆಳವಣಿಗೆ ಎಂದರು. ಸಾಲುಮರದ ತಿಮ್ಮಕ್ಕ ಅವರ ದತ್ತುಪುತ್ರ ಬಳ್ಳೂರು ಉಮೇಶ್ ಮಾತನಾಡಿದರು.

ಮಾಜಿ ಸೈನಿಕ ಯಶೋಧರ್, ಲಕ್ಕುಂದ ಗ್ರಾಮ ಪಂಚಾಯಿತಿ ಅಧ್ಯಕ್ಷೆ ರಾಧಾ, ಡಾ. ಶಶಿಧರ್ ಮೌರ್ಯ, ಬಿಜೆಪಿ ಮಹಿಳಾ ಘಟಕದ ಅಧ್ಯಕ್ಷೆ ಶೋಭಾ ಗಣೇಶ್, ಯುವ ಕಾಂಗ್ರೆಸ್ ಮುಖಂಡ ಬಿ.ಡಿ. ರಾಕೇಶ್, ಕೆಪಿಸಿಸಿ ಸದಸ್ಯ ಹುಲಿಕೆರೆ ರಮೇಶ್, ಸಾಮಾಜಿಕ ಹೋರಾಟಗಾರ ಗೋವಿನಳ್ಳಿ ರವಿ, ವೀರಶೈವ ಲಿಂಗಾಯತ ಮಹಾಸಭಾ ಪ್ರಧಾನ ಕಾರ್ಯದರ್ಶಿ ಮದನ್ ಬಳ್ಳೂರು, ಗೆಂಡೆಹಳ್ಳಿ ಚೇತನ್, ದೀಪು, ತೀರ್ಥಕುಮಾರ್, ನೂರ್ ಅಹ್ಮದ್ ಹಾಗೂ ಇತರರಿದ್ದರು.

ಎಸ್‌ಡಿಎ ಮಂಜುನಾಥ್‌ಗೆ ಬೀಳ್ಕೊಡುಗೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಆಲೂರು: ಪಟ್ಟಣ ಪಂಚಾಯಿತಿಯಲ್ಲಿ ದ್ವಿತೀಯ ದರ್ಜೆ ಸಹಾಯಕರಾಗಿ 34 ವರ್ಷ ಸೇವೆ ಬಳಿಕ ವಯೋನಿವೃತ್ತರಾದ ಎ.ಎಂ. ಮಂಜುನಾಥ್ ಅವರನ್ನು ಪಟ್ಟಣ ಪಂಚಾಯಿತಿ ಭವನದಲ್ಲಿ ಬೀಳ್ಕೊಡಲಾಯಿತು.

ಪಟ್ಟಣ ಪಂಚಾಯಿತಿ ಅಧ್ಯಕ್ಷೆ ತಾಹೇರ ಬೇಗಂ ಮಾತನಾಡಿ, ಸರ್ಕಾರದ ಯೋಜನೆಗಳನ್ನು ಅನುಷ್ಠಾನಗೊಳಿಸುವುದು, ಸಮರ್ಪಕ ನಿರ್ವಹಣೆ, ಸಿಬ್ಬಂದಿ ಸಹಕಾರದೊಂದಿಗೆ ಕಾರ್ಯರೂಪಗೊಳಿಸಿದಾಗ ಜನರಿಗೆ ಅದರ ಪ್ರಯೋಜನ ತಲುಪುತ್ತದೆ. ಈ ನಿಟ್ಟಿನಲ್ಲಿ ಎ.ಎಂ. ಮಂಜುನಾಥ್ ಉತ್ತಮ ಕಾರ್ಯನಿರ್ವಹಿಸುವ ಮೂಲಕ ಜನರ ಮನಸ್ಸಲ್ಲಿ ಉಳಿಯುತ್ತಾರೆ ಎಂದರು. ಮುಖ್ಯಾಧಿಕಾರಿ ಮಂಜುನಾಥ್ ಮಾತನಾಡಿ, 34 ವರ್ಷಗಳ ಕಾಲ ಪಟ್ಟಣ ಪಂಚಾಯಿತಿಯಲ್ಲಿ ಕೆಲಸ ಮಾಡಿದ ಮಂಜುನಾಥ್ ಅವರ ನಿವೃತ್ತಿ ಜೀವನ ಸುಖಕರವಾಗಿರಲಿ ಎಂದ